ಶ್ರೀ ವೈ. ಎನ್. ರುದ್ರೇಶಗೌಡ: ತಮಗೆ ಗೊತ್ತಿರುವ ಹಾಗೆ ಕೆಲವು bus stand ಗಳು Taluk Head quarters ನಲ್ಲಿ ಅರ್ಧ ಎಕರೆ ಪ್ರದೇಶದಲ್ಲಿವೆ. ನಮ್ಮ ಬೇಲೂರಿನಲ್ಲಿ ಸಹ ಕೇವಲ ಅರ್ಧ ಎಕರೆ ಜಾಗದಲ್ಲಿ bus stand ಇರುವಂಥದ್ದು. ಅಂದರೆ, bus stand 20 ಚದರ building ಇರುತ್ತದೆ. ಅದರಲ್ಲಿಯೇ ಪೆಟ್ಟಿಗೆ ಅಂಗಡಿ, ಅದರಲ್ಲಿಯೇ ಹೋಟೆಲ್ ನಿರ್ಮಾಣ, ಅದರಲ್ಲಿಯೇ telephone booth ಇವೆ. ಅಲ್ಲಿ ಇವೆಲ್ಲ facility ಏಕೆ ಬೇಕು? ಅಲ್ಲಿ ಜನರಿಗೇ ಓಡಾಡಲು ಜಾಗವಿಲ್ಲ, ಅಂಥದ್ದರಲ್ಲಿ ಅಲ್ಲಿ ಅಂಗಡಿ ಏಕೆ? ನಾನು ಮಂತ್ರಿಯವರಿಗೆ ಹೇಳುವುದೇನೆಂದರೆ, ಅಲ್ಲಿರುವ ಅಂಗಡಿಗಳನ್ನು ತೆಗೆಸಿ, ಅಲ್ಲಿ ಯಾವುದೇ ಕಾರಣಕ್ಕೂ ಬೇಡ. ಅಲ್ಲಿ ಜನರು ಓಡಾಡುವುದಕ್ಕೆ ಜಾಗವಿಲ್ಲ. ಎಲ್ಲೆಲ್ಲಿ ಅರ್ಧ ಎಕರೆ ಒಳಗಡೆ bus stand ಇದೆಯೋ ಅದನ್ನು ತಾವು ನಿಲ್ಲಿಸಿ ಬೇರೆ ಕಡೆ ಎಲ್ಲಾದರೂ ಬೇಲೂರು town ನಲ್ಲಿ ಮಾಡಿ. ಬೇಲೂರು town ನಲ್ಲೂ ಕೇವಲ ಅರ್ಧ ಎಕರೆ ಜಾಗದಲ್ಲಿ bus stand ಇದೆ. ತಾವು ಇದರ details ತರಿಸಿಕೊಳ್ಳಿ. ಅರ್ಧ ಎಕರೆ ಜಾಗದಲ್ಲಿ ಮಾತ್ರ bus stand ನಿರ್ಮಾಣ ಮಾಡಿದರೆ ಪ್ರತಿ ವರ್ಷ ಒಂದೆರಡು accident ಗಳು ಆಗುತ್ತಿರುತ್ತವೆ.

ಉಪಾಧ್ಯಕ್ಷರು: ರುದ್ರೇಶ್ ಗೌಡರವರೆ, ಸಾಕಷ್ಟು ಅವಕಾಶ ಕೊಟ್ಟಿದ್ದೇವೆ. ತಮ್ಮ ಸಲಹೆ ಪರಿಶೀಲಿಸಿ ಅಷ್ಟೆ.

ವಿದ್ಯಾರ್ಥಿನಿಯರಿಗೆ ಹಾಸ್ಟೆಲ್

34 (205) ಶ್ರೀ ರಾಮಸ್ವಾಮಿಗೌಡ ಬಿ. ಬಿ. (ಕುಣಿಗಲ್):–ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ಪಟ್ಟಣಕ್ಕೆ ಅತಿ ತುರ್ತಾಗಿ ಒಂದು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿ ನಿಲಯದ ಹಾಸ್ಟೆಲ್‌ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಹಾಸ್ಟೆಲ್ ಮಂಜೂರಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):–

ಅ) ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ

ಮಂಜೂರಾತಿಗಾಗಿ ಪ್ರಸ್ತಾವನೆ ಸ್ವೀಕೃತವಾಗಿದೆ. ಪರಿಶಿಷ್ಟ ವರ್ಗದ ವಿದ್ಯಾರ್ಥಿ ನಿಲಯ ಪ್ರಾರಂಭಿಸುವ ಅಗತ್ಯತೆ ಸದ್ಯಕ್ಕೆ ಇರುವುದಿಲ್ಲ.

ಆ) ಪರಿಶೀಲಿಸಲಾಗುತ್ತಿದೆ.

ಚಿಕ್ಕೆ ಗುರುತಿನ ಪ್ರಶ್ನೆ ಸಂ. 34 (205)

ಶ್ರೀ ಬಿ. ಬಿ. ರಾಮಸ್ವಾಮಿಗೌಡ: ಇವರು ಕೊಟ್ಟಿರುವ ಉತ್ತರ ಸಮಂಜಸಕರವಾಗಿ ಕಾಣುತ್ತಿಲ್ಲ. ನಾನು ಸುಮಾರು 3 ವರ್ಷಗಳಿಂದ ನಮ್ಮ ಕುಣಿಗಲ್ ಪಟ್ಟಣಕ್ಕೆ ತುರ್ತಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯ ಬೇಕೆಂಬ ಪ್ರಸ್ತಾಪವನ್ನು ಸರ್ಕಾರದ ಮುಂದಿಟ್ಟಿದ್ದೇನೆ. ಆದರೆ, ಅವರು ಕೊಟ್ಟಿರುವ ಉತ್ತರದಲ್ಲಿ, ಪರಿಶಿಷ್ಟ ಜಾತಿ ಮತ್ತು Metric ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಮಂಜೂರಾತಿಗೆ ಪ್ರಸ್ತಾವನೆ ಸ್ವೀಕರಿಸಿದೆ, ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯದ ಪ್ರಾರಂಭದ ಅಗತ್ಯತೆ ಸದ್ಯಕ್ಕೆ ಇರುವುದಿಲ್ಲ ಎಂದು ಕೊಟ್ಟಿದ್ದಾರೆ. ಅಲ್ಲಿ ಅವಶ್ಯಕತೆ ಇರತಕ್ಕಂಥ ಸ್ಥಳದಲ್ಲಿ ನಾವು ನಮ್ಮ ಕ್ಷೇತ್ರದಲ್ಲಿ ಇಂಥ ಕೆಲಸ ಆಗಬೇಕೆಂಬ ಪ್ರಸ್ತಾವನೆ ಕೊಟ್ಟರೆ ಸಾರಾಸಗಟಾಗಿ ತಿರಸ್ಕರಿಸುವ ಉತ್ತರ ಕೊಟ್ಟರೆ ನಾವು ಸಾರ್ವಜನಿಕರಿಗೆ ಅನುಕೂಲ ಮಾಡುವುದಾದರೂ ಹೇಗೆ? ಅಲ್ಲಿ ಅವಶ್ಯಕತೆ ಇದೆ. ಅಲ್ಲಿಗೆ ಆದಷ್ಟು ಬೇಗ ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಕೊಡಬೇಕೆಂದು ಕೋರುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ಪರಿಶಿಷ್ಟ ಜಾತಿ/ವರ್ಗಗಳ ವಿದ್ಯಾರ್ಥಿನಿಯರ ಹಾಸ್ಟೆಲ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಕೇವಲ 2454 ಇದೆ. ಎಲ್ಲಾ ಹಾಸ್ಟೆಲ್‌ಗಳಲ್ಲಿ ST ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಿಸಿದ್ದೇವೆ. ಈಗಾಗಲೇ ಕುಣಿಗಲ್ ತಾಲ್ಲೂಕಿನಲ್ಲಿ 8 ಹಾಸ್ಟೆಲ್‌ಗಳಿವೆ. ಒಟ್ಟು 547 ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ಮಂಜೂರಾತಿ ನೀಡಿದ್ದು ಕೇವಲ 265 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅಂದರೆ 50% ಸಹ ವಿದ್ಯಾರ್ಥಿಗಳ ಪ್ರವೇಶ ಆಗಲಿಲ್ಲ. ವಿಶೇಷವಾಗಿ ಇವರು ಹೆಣ್ಣುಮಕ್ಕಳ ಹಾಸ್ಟೆಲ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅಲ್ಲೂ ಒಂದು ಹಾಸ್ಟೆಲ್ ಇದೆ. ಅಲ್ಲಿ 55 ಪ್ರವೇಶಕ್ಕೆ ಅನುಮತಿ ಕೊಟ್ಟಿದ್ದೇವೆ, ಆದರೆ, ಕೇವಲ 36 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅಲ್ಲಿರುವ ವಿದ್ಯಾರ್ಥಿಗಳಿಗೆ ಅವಶ್ಯಕತೆ ಇರುವುದು ಕಂಡುಬಂದರೆ ಖಂಡಿತವಾಗಿ ಮಂಜೂರಾತಿ ಮಾಡಿಕೊಡುತ್ತೇವೆ. ಆದರೆ, ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಅನಿಸಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಕೊಟ್ಟರೆ ಮಂಜೂರಾತಿ ಮಾಡಿಕೊಡುತ್ತೇವೆ.

ಶ್ರೀ ವೈ. ಎನ್. ರುದ್ರೇಶ್‌ಗೌಡ: ಮೊದಲು ಹಾಸ್ಟೆಲ್ ಮಂಜೂರು ಮಾಡುವುದನ್ನು ಕಲಿಯಿರಿ Pre-metric and post-metric hostels ತಾಲ್ಲೂಕು head quarter ನಲ್ಲಿ ಅವಶ್ಯಕತೆ ಇದ್ದೇ ಇದೆ. ಎಲ್ಲಾ ತಾಲ್ಲೂಕು head quarters ನಲ್ಲೂ Degree courses, BBM, Diploma Courses ನಡೆಯುತ್ತಿದೆ. ಆದರೆ, ಅಲ್ಲಿ hostel facility ಇಲ್ಲ. ಅದಕ್ಕೋಸ್ಕರ ನಾನು ತಮ್ಮನ್ನು request ಮಾಡುತ್ತೇನೆ. ಬೇಲೂರಿನಲ್ಲಿ hostel ಇಲ್ಲ., pre-metric hostel ಇಲ್ಲ. pre-metricಗೆ ಇದೆ. ತಾಲ್ಲೂಕು head quarters ಗೆ ಮೊದಲು hostel ಸೌಲಭ್ಯ ಕೊಟ್ಟರೆ ಒಳ್ಳೆಯದು.

ಶ್ರೀ ಬಿ. ಬಿ. ರಾಮಸ್ವಾಮಿಗೌಡ: ಪಟ್ಟಣಕ್ಕೂ hostel ಬೇಕೆಂಬುದು ನಮ್ಮ ಬೇಡಿಕೆ.

ಶ್ರೀ ಎ. ನಾರಾಯಣಸ್ವಾಮಿ: ಹಿಂದಿನ ರೀತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ನಡೆಸುವುದಕ್ಕೆ ಬಿಡುವುದಿಲ್ಲ. ನನ್ನ ಇಲಾಖೆಯಲ್ಲಿ ಹಿಂದೆ ಬಹಳಷ್ಟು ವಿದ್ಯಾರ್ಥಿ ನಿಲಯಗಳಿಗೆ 200 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ಕೊಟ್ಟರೆ 100 ಜನ ವಿದ್ಯಾರ್ಥಿಗಳು ಇರುತ್ತಿದ್ದರು, ಆದರೆ, 200 ವಿದ್ಯಾರ್ಥಿಗಳು ಇದ್ದಾರೆಂದು bill ಮಾಡುತ್ತಿದ್ದರು. ನಾವು ಈಗ biometric ವ್ಯವಸ್ಥೆ indtroduce ಮಾಡುತ್ತಿದ್ದೇವೆ. SMS ಮೂಲಕ attendence ವ್ಯವಸ್ಥೆ ಮಾಡಿದ್ದೇನೆ. ಅನೇಕ ಕಡೆ 80 ಸಾವಿರ ಮಕ್ಕಳ admission ಇಲ್ಲ. ಒಟ್ಟಾರೆ ಎಲ್ಲಾ ಜಿಲ್ಲೆಗಳಿಗೂ ನಾನು ಪ್ರವಾಸ ಮಾಡಿ ಮಾಹಿತಿ ಪಡೆದುಕೊಳ್ಳುತ್ತಿದ್ದೇನೆ. ಎಲ್ಲಿ ಅವಶ್ಯಕತೆ ಇದೆ, ಅಲ್ಲಿಗೆ ಖಂಡಿತವಾಗಿಯೂ ಮಂಜೂರಾತಿ ಮಾಡಿಕೊಡುತ್ತೇನೆ. ಅದರ ಬಗ್ಗೆ ಯಾವುದೇ ಅನುಮಾನ ಬೇಡ. ಅನೇಕ ಶಾಸಕರು ಭೇಟಿ ಮಾಡಿದ್ದಾರೆ. ಎಲ್ಲೆಲ್ಲಿ enhancement ಕೊಡಬೇಕೋ, infrastructure ಕೊಡಬೇಕೋ, ಕೊಡುತ್ತಿದ್ದೇವೆ. ತಾವು ಬಂದು ಭೇಟಿ ಮಾಡಿ, ನಿಮ್ಮ ಮಾಹಿತಿ ಸರಿಯಾಗಿದ್ದರೆ ಖಂಡಿತವಾಗಿಯೂ ಮಂಜೂರಾತಿ ಮಾಡಿಸಿಕೊಡುತ್ತೇನೆ.

ಅಂಗನವಾಡಿ ಕಟ್ಟಡಗಳು

35 (338) ಶ್ರೀ ಪಾಟೀಲ್ ವಿ. ಎಸ್.. (ಯಲ್ಲಾಪುರ):–ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 1) ಉತ್ತರ ಕನ್ನಡ ಜಿಲ್ಲೆಗೆ 2011–12ನೇ ಸಾಲಿಗೆ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಲು ಒದಗಿಸಿದ ಅನುದಾನ ಎಷ್ಟು;